		ಸಮಗ್ರ ಗಣಕೀಕರಣ ಯೋಜನೆಯಡಿಯಲ್ಲಿ ಎಲ್ಲಾ ಕುಟುಂಬಗಳ ಭಾವಚಿತ್ರ ಹಾಗೂ ಜೀವಮಾಪಕಗಳನ್ನು ಸೆರೆ ಹಿಡಿದು ಖಾಯಂ ಅಗಿ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲು ಈಗಾಗಲೇ ಕ್ರಮವಹಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (242) 96
ಮಾನ್ಯ ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.
ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿನ ಬಡ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳನ್ನು ವಿತರಿಸುವ ಯೋಜನೆಯು ಸರ್ಕಾರದ ಗಮನದಲ್ಲಿದೆಯೇ?	ಹೌದು.
ಆ.	ಹಾಗಿದ್ದಲ್ಲಿ ಯೋಜನೆಗಳಾವುವು?	ಅಂತ್ಯೋದಯ ಅನ್ನ ಯೋಜನೆ ಹಾಗೂ ಅಕ್ಷಯ (ಬಿಪಿಎಲ್)
ಇ.	ಬಡಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ನಿಗದಿತ ಸಮಯದಲ್ಲಿ ಆಹಾರಧಾನ್ಯಗಳನ್ನು ಸಮರ್ಪಕ ರೀತಿಯಲ್ಲಿ ವಿತರಣೆ ಮಾಡಲು ಸರ್ಕಾರದ ಕ್ರಮಗಳೇನು?	ಸರ್ಕಾರದ ಕ್ರಮಗಳು ಕೆಳಕಂಡಂತಿದೆ. ಪ್ರತ್ಯೇಕವಾಗಿ ನಿಯೋಜಿಸಲ್ಪಟ್ಟ ಸಾಗಾಣಿಕೆ ಗುತ್ತಿಗೆ ದಾರರ ಮುಖಾಂತರ ಆಹಾರಧಾನ್ಯಗಳನ್ನು ಮತ್ತು ಸೀಮೆಎಣ್ಣೆ ಭಾರತ ಆಹಾರ ನಿಗಮ/ತೈಲ ಕಂಪನಿಗಳಿಂದ ಸಗಟು ಮಾರಾಟ ಕೇಂದ್ರಗಳಿಗೆ ಸಾಗಾಣಿಕೆಯಾಗುತ್ತದೆ. ಮತ್ತು ಸಗಟು ಮಾರಾಟ ಕೇಂದ್ರದಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಾಣಿಕೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಆಹಾರಧಾನ್ಯಗಳನ್ನು ಸಗಟು ಮಳಿಗೆಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಾಣಿಕೆ ಮಾಡುವ ಲಾರಿ ಜೊತೆಯಲ್ಲಿ ಆಹಾರ ಪರಿವೀಕ್ಷಕರು/ ಆಹಾರ ಶಿರಸ್ತೇದಾರರು ನ್ಯಾಯಬೆಲೆ ಅಂಗಡಿಯವರೆಗೂ ಹೋಗಿ ಪಡಿತರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗೆ ತಲುಪಿಸುತ್ತಾರೆ. ಪಡಿತರ ಪದಾರ್ಥಗಳು ನ್ಯಾಯಬೆಲೆ ಅಂಗಡಿಗೆ ತಲುಪಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಪಡಿತರ ಪದಾರ್ಥಗಳ ಸಾಗಾಣಿಕೆಯ ವಾಹನವು ನ್ಯಾಯಬೆಲೆ ಅಂಗಡಿ ತಲುಪಿದ ನಂತರ ಐದು ಮಂದಿ ಪಡಿತರ ಚೀಟಿದಾರರ ಸಹಿಯನ್ನು ಡೆಲಿವರಿ ನೋಟ್/ ಬಿಲ್‌ಗಳ

		ಮೇಲೆ ತೆಗೆದುಕೊಳ್ಳಲಾಗುವುದು. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ 7 ಜನ ಸದಸ್ಯರ ಜಾಗೃತಿ ಸಮಿತಿಗಳನ್ನು ರಚಿಸಲಾಗಿದ್ದು. ನಿಯಮಿತವಾಗಿ ಸಭೆಗಳನ್ನು ನಡೆಸಲಾಗುತ್ತದೆ. ಈ ಜಾಗೃತ ಸಮಿತಿಗಳು ನ್ಯಾಯಬೆಲೆ ಅಂಗಡಿಯವರು ಸಗಟು ಮಳಿಗೆಗಳಿಂದ ಅಹಾರಧಾನ್ಯಗಳನ್ನು ಮತ್ತು ಸೀಮೆಎಣ್ಣೆಯನ್ನು ಸಕಾಲಕ್ಕೆ ಒತ್ತುವಳಿ ಮಾಡಿ ವಿತರಿಸುವ ಬಗ್ಗೆ ಮೇಲ್ವಿಚಾರಣೆಯನ್ನು ನಡೆಸುತ್ತದೆ. ಆಹಾರ ಖಾತ್ರಿ ಸಮಿತಿಗಳನ್ನು ಪಂಚಾಯಿತಿ ಮಟ್ಟದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯ ಉಸ್ತುವಾರಿಗಾಗಿ ರಚಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಆಹಾರ ಭದ್ರತಾ ಸಮಿತಿಗಳನ್ನು ರಚಿಸಲಾಗಿದೆ. ಸದರಿ ಸಮಿತಿಯು ಎಲ್ಲಾ ಉಸ್ತುವಾರಿ ಕಾರ್ಯದರ್ಶಿ. ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನೊಳಗೊಂಡಿರುತ್ತದೆ. ಸದರಿ ಸಮಿತಿಯು ಸಭೆ ಸೇರಿ ಆಹಾರ ಭದ್ರತೆಗೆ ಸಂಬಂಧಿಸಿದ ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ವಿತರಣಾ ಪದ್ಧತಿಯ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪರಾಮರ್ಶೆ ಮಾಡಲಾಗುತ್ತಿದೆ. ಆಹಾರ ಇಲಾಖೆಯ ಅಧಿಕಾರಿಗಳು ನ್ಯಾಯಬೆಲೆ ಅಂಗಡಿಗಳು ಮತ್ತು ಸಗಟು ಮಳಿಗೆಗಳ ತಪಾಸಣೆಯನ್ನು ನಿಗದಿತವಾಗಿ ಮಾಡಲಾಗುತ್ತಿದ್ದು. ಉಲ್ಲಂಘನೆಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಅನಿರೀಕ್ಷಿತ ತಪಾಸಣೆಯನ್ನು ನಡೆಸಲು ಆಯುಕ್ತಾಲಯದಲ್ಲಿ ಹಾಗೂ ಜಿಲ್ಲೆಗಳ ಮಟ್ಟದಲ್ಲಿ ವಿಚಕ್ಷಣಾ ದಳಗಳನ್ನು ರಚಿಸಲಾಗಿದೆ. ಪಡಿತರ ಹಂಚಿ ದರ ಮತ್ತು ಹಂಚಿಕೆ ಪ್ರಮಾಣಗಳ ಬಗ್ಗೆ ಮಾಧ್ಯಮಗಳಲ್ಲಿ ವ್ಯಾಪಕ್ ಪ್ರಚಾರ ನೀಡಲಾಗುತ್ತದೆ. ಕೇಂದ್ರ ಸಗಟು ಮಳಿಗೆಯಿಂದ ನ್ಯಾಯಬೆಲೆ ಅಂಗಡಿಯ ಹಂತದವರೆಗೆ ಪಡಿತರ ಪದಾರ್ಥಗಳನ್ನು ಸಾಗಾಣಿಕೆ ಮಾಡುವ ವಾಹನಗಳ ಮೇಲೆ ಕಡ್ಡಾಯ ಪ್ರದರ್ಶನ ಫಲಕದ ವ್ಯವಸ್ಥೆ ಮಾಡಲಾಗುತ್ತಿದೆ.
ಈ)	ಪ್ರಸ್ತುತ ಚಾಲನೆಯಲ್ಲಿರುವ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)	ಪ್ರಸುತ ಚಾಲ್ತಿಯಲ್ಲಿರುವ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳ ವಿವರ ಅನುಬಂಧದಲ್ಲಿ ಲಗತ್ತಿಸಿದೆ.